ಶ್ರೀ ಎಂ. ವೀರಪ್ಪಮೊಯಿಲಿ.—ಈಗ 77 ಘಟಕಗಳು ಕೆಲಸ ಮಾಡುತ್ತಿವೆ. ಒಂದು ವೇಳೆ ತಾವು ಹೇಳಿದ ಪ್ರಕಾರ 77ರ ಪೈಕಿ ಕೇವಲ 31 ಮಾತ್ರ ಕೆಲಸ ಮಾಡುತ್ತಿದ್ದರೆ, ಆ ಬಗ್ಗೆ ನಾವು ಖಂಡಿತವಾಗಿ ಪರಿಶೀಲನೆ ಮಾಡಬಹುದು.

ಶ್ರೀ ಸಿ. ಬೈರೇಗೌಡ.—ಕೋಲಾರದಲ್ಲಿರುವ ಯೂನಿಟ್ ಏನು ತಯಾರು ಮಾಡುತ್ತಿದೆ ಎಂದು ನಾನು ಕೇಳಿದೆ, ಅದಕ್ಕೆ ಉತ್ತರ ಕೊಡಲಿಲ್ಲ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳ ಬಳಿ ವಿವರಗಳು ಇಲ್ಲ ಎಂದು ಹೇಳಿದರು.

ಶ್ರೀ ಸಿ. ಬೈರೇಗೌಡ ಕೋಲಾರದಲ್ಲಿರುವ ಘಟಕದವರು ನಡೆದುಕೊಳ್ಳುತ್ತಿರುವ ಕೋಟಾ ವೆಲ್ಲಾ ಬ್ಲಾಕ್ ಮಾರ್ಕೆಟ್‌ಗೆ ಹೋಗುತ್ತಿದೆ ಎಂಬುದು ತಮಗೆ ಗೊತ್ತಿದೆಯೇ

ಶ್ರೀ ಎಂ. ವೀರಪ್ಪಮೊಯಿಲಿ.—ಕೋಲಾರದಲ್ಲಿರುವ ಯೂನಿಟ್‌ನವರು ಏನು ತಯಾರು ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಆವರೇಸಾದರು ಸಿ. ಜಿ. ಗ್ರೇಡ್ ಅಲ್ಯೂಮಿನಿಯಂ ಉಪಯೋಗ ಮಾಡುತ್ತಿದ್ದರೆ. ಅದರಿಂದ ಯುಟೆನ್‌ಸಿಲ್ ತಯಾರು ಮಾಡುತ್ತಾರೆ. ಇ. ಸಿ. ಗ್ರೇಡ್ ಅಲ್ಯೂಮಿನಿಯಂ ಉಪಯೋಗ ಮಾಡುತ್ತಿದ್ದರೆ ಅದರಿಂದ ಕಂಡಕ್ಟರ್ ತಯಾರು ಮಾಡುತ್ತಾರೆ. ಆದರೆ ಆ ಬಗ್ಗೆ ನನ್ನ ಬಳಿ ವಿವರವಿಲ್ಲ. ಆ ವಿವರವನ್ನು ಖಂಡಿತವಾಗಿ ತರಿಸಿ ನೋಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ,—ಅದು ತಮ್ಮ ಊಹೆಯಾಯಿತು.

ಶ್ರೀ ಸಿ. ಬೈರೇಗೌಡ.—ಕೊಟ್ಟಿರತಕ್ಕ ಗ್ರೇಡ್ ಯಾವುದು ಅದರಿಂದ ಏನನ್ನು ತಯಾರು ಮಾಡುತ್ತಾರೆ. ಅಲ್ಯೂಮಿನಿಯಂ ಕಂಡಕ್ಟರ್ಸ್ ಅಥವಾ ಪಾತ್ರೆಗಳೇ ಎನ್ನುವುದು ತಾವು ಹೇಳಬೇಕು. ರಾ ಮೆಟೀರಿಯಲ್ಸ್ ಯಾವ ಗ್ರೇಡ್‌ದು ಕೊಟ್ಟಿದ್ದಾರೆ ? ಅದನ್ನು ದಯಮಾಡಿ ಹೇಳಿ.

SRI VEERAPPA MOILY.—There are as much as 77 units. If details for all these units are asked, it requires some time. If the Hon'ble member requires that Information I will certainly supply. I want notice.

Loan under Debtors Relief Act

224. SRI T. M. MANJUNATH (Tiptur).—Will the Minister for Co-operation be pleased to state:—

(a) whether there is any proposal to provide loan to those who got relief under the Debtor Relief Act. in Tiptur Taluk.

(b) the number of persons who got relief under the Debtors Relief Act so far in Tiptur Taluk ?

SRI K. H. RANGANATH.—(Minister for Co-operation)

(a) Yes.

(b) 2,156 application have been received.

ಶ್ರೀ ಟಿ. ಎಂ. ಮಂಜುನಾಥ್.—ಸ್ವಾಮಿ ಋಣಪರಿಹಾರ ಕಾಯಿದೆ ತಂದಮೇಲೆ ಬಡವರಿಗೆ ಮತ್ತು ನಿರ್ಗತಿಕರಿಗೆ ಎಷ್ಟೆಷ್ಟು ಸಾಲಗಳನ್ನು, ಯಾವಯಾವ ಸಾಲಗಳನ್ನು ನಮ್ಮ ತಿಪಟೂರು ತಾಲ್ಲೂಕಿನಲ್ಲಿ ಕೊಟ್ಟಿದ್ದೀರಿ ? ಕೊಡುವುದಕ್ಕೆ ಯಾವಯಾವ ಯೋಜನೆಗಳನ್ನು ಹಾಕಿಕೊಂಡಿದ್ದೀರಿ?

† ಶ್ರೀ ಕೆ. ಎಚ್. ರಂಗನಾಥ್.—ನ್ಯಾಷನಲೈಸ್ ಬ್ಯಾಂಕುಗಳಿಂದ ಡಿಫೆರೆನ್ಷ್ಯಲ್ ರೇಟ್ ಆಫ್ ಇಂಟರೆಸ್ಟ್ ಮೇಲೆ ಸಾಲ ಕೊಡಿಸತಕ್ಕಂಥ ವಿಚಾರವನ್ನು ಯೋಚನೆ ಮಾಡುತ್ತಿದ್ದೇವೆ. ಈಗಾಗಲೇ ನಮ್ಮ ಮುಖ್ಯ ಮಂತ್ರಿಗಳು ತಮ್ಮ ಅಭಿಪ್ರಾಯವನ್ನು ಪ್ರಚುರಪಡಿಸಿದ್ದಾರೆ. ಇನ್ನು ತುಮಕೂರು ಜಿಲ್ಲಾ ಬ್ಯಾಂಕು ಈಗ ನಬೆ ಡಿಯರಿ ರೂಲ್ಸ್ ಮಾಡಿ ಚಿನ್ನ ಮತ್ತು ಬೆಳ್ಳಿ ಅಡವಿಟ್ಟು ಕೊಂಡು ಏನು ಸಾಲಗಳನ್ನು ತೆಗೆದುಕೊಂಡಿದ್ದಾರೋ ಅಂಥವರಿಗೆ ಮತ್ತು ಆಗ್ರಿಕಲ್ಚರಲ್ ಲೇಬರರ್ಸ್ ಅವರಿಗೆ ಷಾರ್ಟ್ ಟರ್ಮ್ ಲೋನ್ ಕೊಡತಕ್ಕಂಥ ಯೋಜನೆ ಮಾಡಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಹರಳಕಟ್ಟೆ ಮತ್ತು ಹೊನ್ನಾವಳಿಗಳಲ್ಲಿ ಒಂದು ನೂರು ರೂಪಾಯಿ ಹಣವನ್ನು ಸಾಲವಾಗಿ ಕೊಡತಕ್ಕಂಥ ವ್ಯವಸ್ಥೆ ಮಾಡಿದಾರೆ.

ಶ್ರೀ ಟಿ. ಎಂ. ಮಂಜುನಾಥ್.—ನಮ್ಮ ತಿಪಟೂರಿನಲ್ಲಿ ಪ್ಯಾಪರ್ ಮತ್ತು ಹಳ್ಳಿಗಳಿಂದ ಬಂದಿರತಕ್ಕ ಜನ ಹಣ ಸಿಕ್ಕದೆ ಒದ್ದಾಡುತ್ತಿದ್ದಾರೆ. ತಾವು ಹೇಳುತ್ತೀರಿ ನ್ಯಾಷನಲೈಸ್ಡ್ ಬ್ಯಾಂಕಿಂದ ಹಣ ಕೊಡಿಸುತ್ತೇವೆಂದು.

ಶ್ರೀ ಕೆ. ಎಚ್. ರಂಗನಾಥ್.—ನ್ಯಾಷನಲೈಸ್ಡ್ ಬ್ಯಾಂಕುಗಳ ಮುಖಾಂತರ ಡಿಫೆರೆನ್ಷಿಯಲ್ ರೇಟ್ ಆಫ್ ಇಂಟರೆಸ್ಟ್ ಮುಖಾಂತರ ಕೊಡಿಸುವುದಕ್ಕೆ ವಿಚಾರ ಮಾಡುತ್ತಿದ್ದೇವೆ. ಈಗಾಗಲೇ ಕೊಡಿಸಿದ್ದೇವೆಂದು ಹೇಳಲಿಲ.

ಶ್ರೀ ಟಿ, ಎಂ. ಮಂಜುನಾಥ್,—ನಮ್ಮ ಪರನನರ್ ಜವಾಬ್ದಾರಿಯ ಮೇಲೆ ಋಣ ಪರಿಹಾರ ಸಾಲ ಕೊಡಿ ಎಂದು ಕೇಳಿದರೆ, ಆ ಬ್ಯಾಂಕುಗಳ ಮ್ಯಾನೇಜರ್‌ರವರು ಕೊಡುವ ಹಕ್ಕು ನಮಗೆ ಇದೆ. ನೀವು ಹೇಳಿದಂತೆ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳುತಾರೆ. ಸೆಕ್ಯೂರಿಟಿ ಕೊಟ್ಟವರಿಗೆ ಸಾಲ ಕೊಡುತ್ತೇವೆಂದು ಹೇಳುತಾರೆ ?

ಶ್ರೀ ಕೆ. ಎಚ್. ರಂಗನಾಥ್.—ನಾನು ಆಗಲೇ ಜನರಿಗೆ ನ್ಯಾಷನಲೈಸ್ಡ್ ಬ್ಯಾಂಕುಗಳಿಂದ ಸಾಲಗಳನ್ನು ಕೊಡಿಸಿದ್ದೇವೆಂದು ಹೇಳಲಿಲ್ಲ. ಸರ್ಕಾರ ಇವರ ಬಗ್ಗೆ ಆಲೋಚನೆ ಮಾಡುತಾ ಇದೆ ಎನ್ನುವ ಮಾತನ್ನು ಮಾತ್ರ ಹೇಳಿದೆ.

ಶ್ರೀ ಟಿ. ಎಂ. ಮಂಜುನಾಥ್.—ನ್ಯಾಷನಲೈನ್ಡ್ ಬ್ಯಾಂಕು ಮತ್ತು ಜಿಲ್ಲಾ ಕೋ ಆಪ್ ರೇಟೀವ್ ಬ್ಯಾಂಕುಗಳನ್ನು ಬಿಟ್ಟು ಬಿಟ್ಟರೆ ಇನ್ನು ಉಳಿದ ಖಾಸಗಿ ಜನರು ಯಾರಾದರೂ ಬ್ಯಾಂಕಿನ ರೇಟಿನಲ್ಲಿ ಸಾಲ ಕೊಡುವುದಕ್ಕೆ ಮುಂದೆ ಬಂದರೆ ಅದಕ್ಕೆ ನಿಮ್ಮ ಕಾನೂನಿಂದ ಯಾವ ರೀತಿಯಿಂದಲೂ ತೊಂದರೆ ಮಾಡಬಾರದು. ಆ ರೀತಿ ಮಾಡಲು ಸಾಧ್ಯವೇ ?

ಶ್ರೀ ಕೆ. ಎಚ್. ರಂಗನಾಥ್.—ಆ ರೀತಿ ಖಾಸಗಿ ಜನರಿಂದ ಸಾಲವನ್ನು ಈ ಬಡವರಿಗೆ ಕೊಡಿಸುವ ವಿಚಾರ ಸರ್ಕಾರಕ್ಕೆ ಇದ್ದರೆ ಈ ಕಾನೂನನ್ನು ತರುವ ಪ್ರಸಂಗವೇ ಬರುವುದಿಲ್ಲ.

ಶಿರಗುಪ್ಪದ ಖಿಂಡಸಾರಿ ಕಾರ್ಖಾನೆ

೨೩೬. ಶ್ರೀ ಬಿ. ಇ. ರಾಮಯ್ಯ (ಶಿರಗುಪ್ಪ).—ಕೈಗಾರಿಕಾ ಹಾಗೂ ಸಾಂಸದಿಕ ವ್ಯವಹಾರಗಳ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ:—

(ಅ) ಶಿರಗುಪ್ಪ ಪುರನಿವಾಸಿಗಳಿಂದಲೂ ಹಾಗೂ ಶಾಸಕರಿಂದಲೂ ಶಿರಗುಪ್ಪದಲ್ಲಿರುವ ಖಾಸಗೀ ಖಿಂಡಸಾರಿ ಕಾರ್ಖಾನೆಗೆ ಆರೋಗ್ಯ ದೃಷ್ಟಿಯಿಂದಲೂ ಪ್ರಯಾಣದ ಅನುಕೂಲತೆಗೆ ಅಡಚಣೆ ಉಂಟಾಗುವುದೆಂಬ ದೃಷ್ಟಿಯಿಂದ ಲೈಸನ್ಸ್‌ನ್ನು ಕೊಡಬಾರದೆಂಬ ಬೇಡಿಕೆಯ ಪತ್ರವು ಸರಕಾರದವರಿಗೆ ಬಂದಿದೆಯೇ ;

(ಆ) ಈ ವಿಷಯದಲ್ಲಿ ಬಳ್ಳಾರಿ ಜಿಲ್ಲಾಧಿಕಾರಿಗಳು ಹಾಗೂ ಆರೋಗ್ಯಾಧಿಕಾರಿಗಳನ್ನು ಪರಿಶೀಲಿಸಿ ಲೈಸನ್ಸು ಕೊಡಬಾರದೆಂಬ ವಿಷಯವನ್ನು ಸರಕಾರದವರಿಗೆ ಕಳುಹಿಸಿರುವುದು ನಿಜವೇ ;

(ಇ) ಇಬ್ಬರು ಮೇಲ್ಕಂಡ ಅಧಿಕಾರಿಗಳು ಲೈಸನ್ಸ್ ಕೊಡಬಾರದೆಂದು ಅಭಿಪ್ರಾಯ ತಿಳಿಸಿದಾಗ್ಯೂ ಅದರ ಮಾಲೀಕನು ಲೈಸನ್ಸ್ ಪಡೆದುದಕ್ಕೆ ಕಾರಣಗಳೇನು ;